ಇರುವವರೆಗೂ ಜೀವ ಅತ್ತ ಇತ್ತ ಕಣ್ಣು, ಕಿವಿಗಳ
ಹಾಯುತ್ತಲೇ ಇತ್ತು
ಪಾಪ, ಈಗವಗೆ ಮಹಾಪ್ರಸ್ಥಾನದ ದೃಷ್ಟಿ ಬರಲಿ
ತಗ್ಗು ತಿಟ್ಟುಗಳ ಸವರಿದ್ದೆ ಸವರಿದ್ದು
ಕಡೆಗಾದರೂ ಸಿಗಲಿ ಮಹಾಮಾರ್ಗ

ಮತ್ತೆ ಮತ್ತಾಯ ನೆನಪಾದ
'ಎಲ್ಲ ಸಭೆ ಸೇವಕರ ಮನಸ್ಸು ಒಂದಾಗಲಿ
ಕರೆದಾತನೇ ಕಾರ್ಯಮಾಡಿ ಪೂರೈಸಲಿ
ಆಮೇನ್'
ಭುಜಕೆ ಭುಜ ಕೊಟ್ಟಿದ್ದರೆ? ಚೆನ್ನಿತ್ತು ಈ ವಿಮಾನ ಏರುವ
ಮೊದಲು?

ಗೆಳೆಯರೆಲ್ಲ ಸೇರಿ ನಡೆಸಿಯೆ ಬಿಟ್ಟರು
ಭೂರಿ ಭೋಜನ ತುಂಬಿದ ಮಸಣವೆ ಮದುವೆ ಮನೆ
ಹೂ ಹಾರಗಳ ಕಿತ್ತು ಬಿಸುಟರೋ ನಡುರಸ್ತೆಯಲಿ
ಹೂವ ನೆಕ್ಕುವ ತುಂಬಿ ಜೇನ ತುಂಬಿಕೊಳುವ ಕಣ್ಣಲ್ಲಿ
ಮತ್ತೆ ನೆನಪಾದಳು ತಾಯಿ
ತುಂಬಿ ಕಣ್ಣಲ್ಲಿಯೂ ಪೊರೆವ ತಾಯ ಕಣ್ಣು!

ಮಾರಿ ಜಾತ್ರೆಗೆ ಬಂದ ಮೊಗವಿರದ ಕೋಣ
ಉಬ್ಬಿಸಿ ಕೊಬ್ಬಿಸಿ ಹಣೆಗೆ ಇಟ್ಟರೋ ತಿಲಕ
ಕಾಲಲ್ಲಿ ಊರಲ್ಲಿ ನಡುವಲ್ಲಿ ಎಂಥದೋ ಪುಳಕ
ಮಚ್ಚು ಫಳಫಳ ಮಿಂಚಿ ಕಣ್ಣಲ್ಲಿ ಕನ್ನಡಿ ಮೂಡಿ
ನಾಕು ದಿಕ್ಕಿಗೆ ತಿರುತಿರುಗಿ ತೊಳಲುವ ತಲೆಗೆ ಒಂದೆ ಕವೆ

ನೆತ್ತಿಯ ಮೇಲೆ ಇಟ್ಟ ಸುತ್ತಿಗೆಯ ಹೊಡೆತ
ಕುತ್ತಿಗೆಯಲ್ಲೆಲ್ಲ ಫಳಫಳನೆ ಮಿಂಚುಮಾಲೆ
ಎದೆಯಲ್ಲಿ ಸಿಡಿಲು ಕಾಲ್ಲ ನಡುಕ
ಹರಿದು ಹಾರುತ್ತಲಿದೆ ನೆತ್ತರು ಹಿಮಗಿರಿಯ ತುದಿಗೆ
ಕಾಲ ತಿದಿ ಒತ್ತಿ ಸವಾರಿಯನು ಮಾಡಿತ್ತು
'ಓಂ ಮಣಿಪದ್ಮೇ ಹಂ' ಕೂಗಿತ್ತು ಜೀವ

ಸಹಕರಿಸಿದರು ಹೊತ್ತು ಮಿತ್ರವೃಂದ
ಅವರವರ ಪಾಳಿಯನು ಮಾಡಿದರು ಚಾಚುತಪ್ಪದೆ
'ಉಪ್ಪಿನ ಬೆಟ್ಟದ ಮೇಲೆ ಕೂಡಿಸಿದರು
ಕರುಣೆಯಲಿ ಕಂಬನಿಯನೇ ಹರಿಸಿದರು

